ದೋಷಗಳಿಗೂ ತುತ್ತಾಗದು ಎಂಬುದರಿಂದ, ನನ್ನ ಆತ್ಮ ಹಾಗೆಯೇ ಕಳಂಕವಿಲ್ಲದೆ ಉಳಿದಿದೆ. ಅನುಭವಿಸಿದ್ದು ಮತ್ತೊಬ್ಬರ ಶರೀರವಾದ್ದರಿಂದ ನನ್ನ ಶರೀರವೂ ಕಳಂಕಗೊಳ್ಳದೆ ಇದೆ..."

ಸರಸವಾಣಿ ಯಾವ ಉತ್ತರವನ್ನೂ ಹೇಳಲಿಲ್ಲ. ಅವಳ ರೆಪ್ಪೆಗಳು ಆ ಹಕ್ಕಿಗಳ ರೆಕ್ಕೆಗಳಂತೆಯೇ ಪಟಪಟನೆ ಬಡಿದುಕೊಂಡವು. ಕಣ್ಣಾಲಿಗಳಲ್ಲಿ ಹನಿಗಳು ತೆಳುವಾಗಿ ತುಂಬಿ ನಿಂತವು. ಏನನ್ನೂ ಮಾತನಾಡದೇ ತನ್ನ ಆಸನದಿಂದ ಎದ್ದು ನಿಂತು ಅವಳು ಮಂಡನ ಮಿಶ್ರರನ್ನು ನೋಡಿದಳು. ಅವರ ಮುಖ ಕಳೆಗುಂದಿತ್ತು. ಅವರು ತನ್ನ ಮಡದಿಯ ಮುಖ ನೋಡುವ ಧೈರ್ಯವಿಲ್ಲದೆ ತಲೆ ತಗ್ಗಿಸಿ ನಿಂತಿದ್ದರು.

ಶಂಕರರೂ ಸಹ ಎದ್ದು ನಿಂತರು. ಒಂದು ದೊಡ್ಡ ಕೆಲಸವನ್ನು ಸಾಧಿಸಿದ ಹೆಮ್ಮೆ ಅವರ ಮುಖದಲ್ಲಿ ಕಂಡಿತು. ಅವರು ಹಸನ್ಮುಖರಾಗಿಯೇ ಇದ್ದರು. ಅವರ ಮಟ್ಟಿಗೆ ಅವರ ಬದುಕಿನ ಕ್ರಮಗಳಲ್ಲಿ ಯಾವ ವ್ಯತ್ಯಾಸವೂ ಉಂಟಾಗುವುದಿಲ್ಲ. ಅವರ ಶಿಷ್ಯರ ಸಂಖ್ಯೆಯಲ್ಲಿ ಒಂದು ಹೆಚ್ಚಾಗುತ್ತದೆ ಎಂಬುದರ ಹೊರತು.

ಮಂಡನ ಮಿಶ್ರ ಒಳಗೆ ಹೋಗಿ ಕಾವಿ ಉಡುಪು ಧರಿಸಿ, ಸನ್ಯಾಸಿಯ ರೂಪತಾಳಿ ಬಂದು ಶಂಕರರ ಮುಂದೆ ನಿಂತರು. ಸರಸವಾಣಿಯ ಬಳಿ ಹೇಗೆ ವಿದಾಯ ಹೇಳುವುದೆಂಬ ಸಂಕಟದೊಂದಿಗೆ ಅವರು ಅವಳ ಸಮೀಪಕ್ಕೆ ಹೋದರು. ಅವಳು ಅವರನ್ನು ನೋಡಲು ಬಯಸದವಳಂತೆ, ಅಂಗಳದ ಕಿಟಕಿಯ ಮೂಲಕ ದೂರದಲ್ಲಿ ಕಾಣುವ ನರ್ಮದೆಯ ಪ್ರವಾಹವನ್ನು ನೋಡುತ್ತ ನಿಂತಳು.

"ಸನ್ಯಾಸಿಯಾದ ಮೇಲೆ, ಹೆಂಡತಿ, ಮಕ್ಕಳು ಎಂಬ ಯಾವ ಸಂಬಂಧಗಳನ್ನು ನಮ್ಮ ಮನಸ್ಸಿನಲ್ಲಿ ಹೊತ್ತು ಬರಲಾಗದು, ಮಂಡನ ಮಿಶ್ರರೇ... ಈ ಕ್ಷಣದಿಂದ ಆಕೆ ನಿಮ್ಮ ಮಡದಿಯೋ ನೀವು ಆಕೆಯ ಗಂಡನೋ ಅಲ್ಲ. ಯಾರ ಬಳಿಯೂ ಹೇಳಿಕೊಳ್ಳದೆ, ಯಾರನ್ನೂ ಹಿಂತಿರುಗಿ ನೋಡದೆ, ನನ್ನೊಂದಿಗೆ ನನ್ನ ಹಾದಿಯಲ್ಲಿ ನಡೆದು ಬನ್ನಿ..." ಎಂದು ಶಂಕರರು ಅವರ ಕೈಗಳನ್ನು ತಮ್ಮ ಕೈಗಳಲ್ಲಿ ಹಿಡಿದು ಬಾಗಿಲ ಕಡೆಗೆ ನಡೆಯ ತೊಡಗಿದರು.

ಆ ಸಂದರ್ಭದಲ್ಲಿ ಹೊರಗಿನ ಅಂಗಳದಲ್ಲಿ ಸುತ್ತಲೂ ತೂಗಾಡುತ್ತಿದ್ದ ಪಂಜರಗಳಿಂದ ಸರಸವಾಣಿಯ ಗಿಳಿಗಳು ರೆಕ್ಕೆಗಳನ್ನು ಬಹಳ ಆಕ್ರೋಶದಿಂದ ಬಡಿಯುತ್ತ ಆ ಸಣ್ಣ ಜಾಗದಲ್ಲಿಯೇ ಹಾರಾಡಿ ತಿರುಗುತ್ತ ಆರ್ಭಟಿಸಿದವು. ಪಂಜರಗಳೆಲ್ಲವೂ ಅಲ್ಲೋಲಕಲ್ಲೋಲವಾದವು. ಆ ಜಾಗವೆಲ್ಲಾ ಗಿಳಿಗಳ ಕಿರುಚಾಟದಿಂದ ತುಂಬಿ ಗಲಿಬಿಲಿಯಾಯಿತು. ಸರಸವಾಣಿ ಕಿರುಚಾಟವನ್ನು ಕೇಳಿ ಗಿಳಿಗಳು ಇದ್ದೆಡೆಗೆ ಬಂದಳು. ಆದರೆ ಅವಳು ಗಿಳಿಗಳಿಗೆ ಏನನ್ನೂ ಹೇಳಲಿಲ್ಲ.

ಗಿಳಿಗಳು ತಮ್ಮೊಳಗೆ, ಎಲ್ಲರ ಕಿವಿಗಳಿಗೂ ಬೀಳುವಂತೆ ಎತ್ತರದ ದನಿಯಲ್ಲಿ ಮಾತನಾಡಿ ಕೊಂಡವು.

ಒಂದು ಗಿಳಿ ಕೇಳಿತು: "ಇದು ಸರಿಯಲ್ಲ. ಸರಸವಾಣಿ ಹೇಗೆ ಇದಕ್ಕೆ ಸಮ್ಮತಿಸಿದಳು? ಅವಳೇಕೆ ಏನೂ ಮಾತನಾಡದೇ ಸುಮ್ಮನಿದ್ದಾಳೆ?"

ಅದಕ್ಕೆ ಮತ್ತೊಂದು ಗಿಳಿ ಉತ್ತರ ನೀಡಿತು: "ಅವಳು ಮಾತನಾಡದಿದ್ದರೆ ಏನಂತೆ? ನಾವು ಮಾತನಾಡೋಣ. ನಾವಲ್ಲವೇ ಅವಳು. ಅವಳಲ್ಲವೇ ನಾವು. ಅವಳ ದನಿಯಲ್ಲಿ ನಾವು ಮಾತನಾಡುವ. ನಾವವಳ ಮನಸ್ಸನ್ನು ಅರಿತವರಲ್ಲವೇ ಈಗ ನಾವು ಅವಳಿಗೆ ದನಿಯಾಗೋಣ!"

ಗಿಳಿಗಳೆಲ್ಲ ಈಗ ದನಿಯನ್ನು ಸರಸವಾಣಿಯ ದನಿಯಂತೆ ಬದಲಾಯಿಸಿಕೊಂಡಂತೆ ಕಂಡವು.